ನಿಂತು. ನಂತರ ತನ್ನ ತಾಯಿಗೆ ಹೇಳಿದ, "ಅಮ್ಮ, ನನಗೆ ತಿಳಿಯದೆ ಹಾಲು ಕೊಡಬೇಕೆಂದು ನಿನಗೆ ತೊಂದರೆ ಕೊಟ್ಟೆ. ಕ್ಷಮಿಸಮ್ಮಾ. ಆದರೆ, ಇನ್ನುಮೇಲೆ ಆ ಅಕ್ಕಿ ತೊಳೆದ ನೀರನ್ನು ಮಾತ್ರ ನಾನು ಕುಡಿಯುವುದಿಲ್ಲ."

ಮನುಷ್ಯನಿಗೆ ಸತ್ಯದರ್ಶನವಾದ ನಂತರ, ಯಾವುದೇ ಕಾರಣಕ್ಕೂ ಹಿಂದಿನಂತೆ ಜೀವನ ನಡೆಸಲು ಸಾಧ್ಯವಾಗುವುದೇ ಇಲ್ಲ. ಅವನು ಕಂಡುಂಡ ಸತ್ಯದರ್ಶನ, ಅವನ ಬಾಳಿನಲ್ಲಿ ಪರಿಣಾಮ ಬೀರಿ, ಆ ಮನುಷ್ಯನ ಜೀವನವನ್ನು ಸತ್ಯದ ಬೆಳಕಿನಲ್ಲಿ ರೂಪಿಸಿಕೊಳ್ಳುವುದಕ್ಕೆ ಕಾರಣವಾಗುತ್ತದೆ.

✡

## ತೇಲದಿದ್ದರೆ ಶ್ರೀರಾಮನಾಣೆ

ಸಂಗ್ರಹ : ನಿರುಪಮಾನಂದ ; ಕಲೆ : ಸಿದ್ದಲಿಂಗಯ್ಯ ಜಿ.ಸಿ.




ಶ್ರೀರಾಮ–ರಾವಣರ ಯುದ್ಧ ಸನ್ನಿಹಿತವಾಗಿತ್ತು. ಎರಡೂ ಕಡೆ ರೋಷಾವೇಶದಿಂದ ಯುದ್ಧ ಸಿದ್ಧತೆಗಳು ನಡೆದಿದ್ದುವು. ರಾಮನ ಕಡೆಯವರಿಗೆ ಸಮುದ್ರವನ್ನು ದಾಟುವ ಬಗೆ ಹೇಗೆ ಎಂಬ ಚಿಂತೆ ಕಾಡಲಾರಂಭಿಸಿತ್ತು. ಕೊನೆಗೂ ಕೈಗೆ ಸಿಕ್ಕ ಕಲ್ಲುಗಳ ಮೇಲೆಲ್ಲಾ 'ಜೈ ಶ್ರೀರಾಮ' ಎಂದು ಬರೆದು, ಸಮುದ್ರಕ್ಕೆ ತಂದು 'ತೇಲದಿದ್ದರೆ ಶ್ರೀರಾಮನಾಣೆ' ಎಂದು ಹೇಳಿ ನೀರಿಗೆ ಹಾಕುತ್ತಿದ್ದರು, ಅವು ಮುಳುಗದೆ ತೇಲುತ್ತಿದ್ದವು. ಹೀಗೆ ಒಂದರ ಪಕ್ಕ ಒಂದು ಕಲ್ಲನ್ನು ನೀರಿನಲ್ಲಿ ಜೋಡಿಸುತ್ತಾ ಕಪಿಗಳು ಸೇತುವೆಯನ್ನು ನಿರ್ಮಿಸಲಾರಂಭಿಸಿದವು. ಈ ವಿಷಯ ತಿಳಿದು ಲಂಕೆಯ ರಾಕ್ಷಸರಲ್ಲಿ ಕೋಲಾಹಲವುಂಟಾಯಿತು, ಶ್ರೀರಾಮನಾಣೆ ಇಟ್ಟರೆ ಕಲ್ಲುಗಳೇ ತೇಲುತ್ತವೆ, ರಾಮನ ಹೆಸರಿಗೇ ಅಷ್ಟು ಶಕ್ತಿ ಇದೆಯೆಂದರೆ, ಸ್ವತಃ ರಾಮನಿಗೆ ಎಷ್ಟು ಶಕ್ತಿ ಇರಬೇಡ! ಅವರು ಸಮುದ್ರ ದಾಟಿ ಇತ್ತ ಬಂದರೆ ನಮ್ಮೆಲ್ಲರ ಸರ್ವನಾಶ ಖಚಿತವೇ. ಶ್ರೀರಾಮನ ನಾಮಕ್ಕೆ, ಸ್ವತಃ ರಾಮನಿಗೆ ಇರುವ ಶಕ್ತಿ, ನಮ್ಮ ರಾವಣನಿಗೆ, ಅವನ ನಾಮಕ್ಕೆ ಇಲ್ಲ ಎಂದು ಭಯ ಪಡಲಾರಂಭಿಸಿದರು. ಈ ವಿಷಯವನ್ನು ಗುಪ್ತಚಾರದಿಂದ ತಿಳಿದ ರಾವಣ ತನ್ನ ಕಡೆಯವರಲ್ಲಿ ಆತ್ಮವಿಶ್ವಾಸ ತುಂಬುವ ಸಲುವಾಗಿ, ಒಂದು ದಿನ ಲಂಕೆಯ ಎಲ್ಲಾ ರಾಕ್ಷಸರನ್ನೂ, ಆಸ್ಥಾನಿಕರನ್ನೂ, ತನ್ನ ಪತ್ನಿಯನ್ನೂ ಸಮುದ್ರತೀರಕ್ಕೆ ಕರೆದುಕೊಂಡು ಬಂದ. ಒಂದು ಕಲ್ಲನ್ನು ತರಿಸಿ, ಅದರ ಮೇಲೆ 'ಜೈ ರಾವಣ' ಎಂದು ಬರೆದು ನೀರಲ್ಲಿ ಬಿಟ್ಟ. ಆಶ್ಚರ್ಯ! ಕಲ್ಲು ಮುಳುಗದೆ ತೇಲಲಾರಂಭಿಸಿತು. ಇದನ್ನು ಕಂಡು ಲಂಕೆಯ ಪ್ರಜೆಗಳಿಗೆ ರೋಮಾಂಚನವಾಯಿತು, ಹರ್ಷದಿಂದ ಹುಚ್ಚರಂತಾದರು. ನಮ್ಮ ರಾವಣ ರಾಮನಿಗಿಂತೇನು ಕಡಿಮೆ, ಬರಲಿ ರಾಮ ಇಲ್ಲಿಗೆ. ಯುದ್ಧದಲ್ಲಿ ಸರಿಯಾಗಿ ಬುದ್ಧಿ ಕಲಿಸುತ್ತೇವೆ, ಎಂದು ಆತ್ಮವಿಶ್ವಾಸದಿಂದ ಹೇಳಲಾರಂಭಿಸಿದರು. ಅಂದು ರಾತ್ರಿ ಮಂಡೋದರಿ, ತನ್ನ ಪತಿ ರಾವಣನನ್ನು ಅನುಮಾನದಿಂದ ಕೇಳಿದಳು. "ನಿಜವಾಗಿಯೂ ನಿಮ್ಮ ನಾಮಕ್ಕೆ ಅಷ್ಟು ಶಕ್ತಿ ಇರುವುದೇ?" ಎಂದು. ಆಗ ರಾವಣ ಹೇಳಿದ: "ಅಯ್ಯೋ ಮರುಳೇ, ಇದನ್ನು ನೀನು ನಂಬಿರುವೆಯಾ? ನಾನು ಕಲ್ಲಿನ ಮೇಲೆ 'ಜೈ ರಾವಣ' ಎಂದು ಬರೆದೆ ನಿಜ. ಆದರೆ ನೀರಿನಲ್ಲಿ ಹಾಕುವಾಗ ಮನಸ್ಸಿನಲ್ಲಿ 'ತೇಲದಿದ್ದರೆ ಶ್ರೀರಾಮನಾಣೆ' ಎಂದುಕೊಂಡೆ, ತೇಲಿತು" ಎಂದ.

✡